ಶ್ರೀ ಗುರುಭ್ಯೋ ನಮಃ ಶ್ರೀ ವಿಜಯದಾಸ ಗುರುಭ್ಯೋ ನಮಃ

ಶ್ರೀ ಐಕೂರು ನರಸಿಂಹಾಚಾರ್ಯ ಗುರುಭ್ಯೋ ನಮಃ

ಶ್ರೀ ಐಕೂರು ನರಸಿಂಹಾಚಾರ್ಯರು ಸಜ್ಜನರ ಉಧ್ಧಾರಕ್ಕಾಗಿ ಪ್ರತಿನಿತ್ಯ ಮೂರು ಕಾಲಗಳಲ್ಲಿ ಮಾಡಲೇಬೇಕಾದ ಅನುಷ್ಠಾನಗಳನ್ನು ಕೃಪೆಯಿಂದ ತಮ್ಮ ಶಿಷ್ಯರಿಂದ ಬರೆಸಿರುವ ಆನ್ಹಿಕ ತ್ರಯಗಳು.

ಈ ದುರ್ಲಭವಾದ ಭರತಖಂಡದಲ್ಲಿ ಬಹುಸಂಚಾರಿ, ಅದರ ಮೇಲೆ ಬಹು ದೊಡ್ಡವರ ಅನುಗ್ರಹದಿಂದ ನಮಗೆ ಈ ಮಾನವ ಜನ್ಮ ತತ್ರಾಪಿ ಬ್ರಾಹ್ಮಣ ಜನ್ಮ ಅದರಲ್ಲೂ ಆ ಪ್ರಭುವಿನ ಚೊಚ್ಚಲಮಗನ ಮತದಲ್ಲಿ ಜನ್ಮ, ಇಷ್ಟು ಸೌಕರ್ಯಕೊಟ್ಟಾಗ ನಾವು ಮಾಡಬೇಕಾದ ಕೆಲಸಗಳು ಮೂರು - ೧.ಪ್ರಾತಃ ಕಾಲದಲ್ಲಿ ಧ್ಯಾನ ೨. ಮಾಧ್ಯಾನ್ಹ ಕಾಲದಲ್ಲಿ ಪ್ರಾಣಾಗ್ನಿಹೋತ್ರ ಕ್ರಮದಿಂದ ಭೋಜನ ೩. ಸಾಯಂಕಾಲ ಸರ್ವೇಂದ್ರಿಯ ಕೃತ ಕರ್ಮ ಸಮರ್ಪಣೆ. ಇವು ಏತಕ್ಕಾಗಿ ಮಾಡಬೇಕೆಂದರೆ ಕರ್ತೃತ್ವ, ಭೋಕ್ತೃತ್ವ ಸ್ವಾಭಿಮಾನಗಳಿಂದ ಬಂಧನದಲ್ಲಿದ್ದೀವಿ. ಮೃತ್ಯು ಸಮವಾದ ದುಃಖಗಳನ್ನು ಅನುಭವಿಸುತ್ತಿದ್ದೇವೆ ಇದರಿಂದ ಬಿಡುಗಡೆ ಹೊಂದುವ ಬಗ್ಗೆ ಅರಿವಿಕೆ ಆಗವಲ್ಲದು. ನಾವುಗಳು ಉದ್ಧಾರವಾಗಲೆಂದೇ ಮೂರು ವಸ್ತುಗಳನ್ನು ಕೊಟ್ಟಿದ್ದಾನೆ. ಅವು ಯಾವುವೆಂದರೆ ೧.ಮನಸ್ಸು ೨.ಬುಧ್ಧಿ ೩.ಇಂದ್ರಿಯಗಳು. ಮನಸ್ಸಿನ ಧರ್ಮ ದೇವರಧ್ಯಾನ ಮಾಡುವುದು, ಬುದ್ಧಿಯ ಧರ್ಮ ಇದಕ್ಕೆ ಬೇಕಾದ ತತ್ವನಿಶ್ಚಯ ಮಾಡುವುದು, ಅದರಂತೆ ಆಚರಿಸುವುದು ಇಂದ್ರಿಯ ಧರ್ಮ. ಇವು ಕೆಲಸ ಮಾಡಲಿಲ್ಲವೆಂದರೆ ವಿಧರ್ಮ ಆಚರಿಸಿದಂತಾಯ್ತು. ಅದು ಭಯಜನಕವಾದ್ಧರಿಂದ ಈ ಅನ್ಹಿಕ ತ್ರಯಗಳ ಅನುಸಂಧಾನ ಅವಶ್ಯ ಮಾಡತಕ್ಕದ್ದು.

ವಿಶ್ವ ತೈಜಸರು ಪ್ರಾಣದೇವರು ಜೀವನೊಂದಿಗೆ ಪ್ರಾಜ್ಞನಿಂದ ಹೃದಯದಿಂದ ಕಂಠದಲ್ಲಿನ ತೈಜಸನಲ್ಲಿಗೆ ಬರುತ್ತಾರೆ, ಕೂಡಲೇ ಜೀವಿಗೆ ಸ್ವಪ್ನಗಳಾಗುತ್ತವೆ. ಅಲ್ಲಿಂದ ವಿಶ್ವ, ಪ್ರಾಣದೇವರು ಜೀವನೊಂದಿಗೆ ದಕ್ಷಿಣಾಕ್ಷಿಯಲ್ಲಿ ಬಂದೊಡನೆ ಜಾಗೃದಾವಸ್ಥೆ ಪ್ರಾಪ್ತಿ ಆಗುತ್ತದೆ. ಕಾರಣ ಸುಪ್ತಿಯಿಂದ ದೇವರ ಸಹವಾಸ ಸುಖ ಅನುಭವ ಮಾಡಿಸಿಕೊಟ್ಟ (ತೋರಿಸಿಕೊಟ್ಟ ) ಅಂತ ಜೀವರು ಪ್ರಾಜ್ಞನಾಮಕನ ಮಹೋಪಕಾರ ಚಿಂತನೆ ಮಾಡಬೇಕು.

ಸ್ವಪ್ನಾವಸ್ಥೆಯಲ್ಲಿ ಗಜತುರಗ ಮೊದಲಾದ ಸಕಲ ಪದಾರ್ಥಗಳ ಸಂಯೋಗ ಮಾಡಿಸಿ ಜಾಗೃದಾವಸ್ಥಾ ಪ್ರಾಪ್ತಿಸಿದ ಕೂಡಲೇ ವಿಯೋಗ ಮಾಡಿಸಿಬಿಡುತ್ತಾನೆ, ಆದರೇ ತಜ್ಜನ್ಯ ದುಃಖ ಆಗುವುದಿಲ್ಲ. ಇದರಿಂದ ನಾವು ಬೇಡುವುದೇನೆಂದರೆ ಓ ತೈಜಸ ಈ ದಿನದ ಜಾಗೃದಾವಸ್ಥೆಯಲ್ಲಿ ಒದಗುವ ಸಂಯೋಗ ವಿಯೋಗ ಜನ್ಯ ಸುಖ ದುಃಖಗಳ ಲೇಪ ನನಗೆ ಆಗುವುದಿಲ್ಲೆಂದು ಸ್ವಪ್ನಾವಸ್ಥೆಯಿಂದಲೇ ದಿಗ್ದರ್ಶನ ಮಾಡಿಸಿದೆ ಕಾರಣ ಈ ನಿನ್ನ ಅತ್ಯುನ್ನತ ಉಪಕಾರವನ್ನು ಸದಾ ನೆನೆಪಿನಲ್ಲಿಡುವಂತೆ ಮಾಡು.(ಇದರಿಂದ ಭಕ್ತಿ, ವಿರಕ್ತಿ ಎರಡೂ ಸಿದ್ದಿಸುವುವು).

ಉಪಾಸನಾ- ಕರ್ಮ ಫಲಾರ್ಪಣೆ ಮೂಲಕ ಜನ್ಮಾದಿಗಳು ನಿಲ್ಲಲೆಂದು ಜಾಗೃದಾವಸ್ಥಾ ಕೊಟ್ಟ ಕಾರಣ ವಿಶ್ವನಾಮಕನೇ! ಈ ನಿನ್ನ ಉಪಕಾರವನ್ನು ಏನು ಮಾಡಿದರೂ ಎಷ್ಟು ವರ್ಣಿಸಿದರೂ ಸಾಲದು, ಕಾರಣ ನನಗೆ ನಿನ್ನಲೂ, ನಿರ್ಮಲಾಂತಕರಣರಾದ ನಿನ್ನವರಲ್ಲೂ ಸರ್ವದಾ ಕೃತಜ್ಞನಾಗಿರುವಂತೆ ಮಾಡು.

ಒಬ್ಬ ಪರಮಾತ್ಮನೇ ವಿಶ್ವ ತೈಜಸ ಪ್ರಾಜ್ಞನೆಂಬ ರೂಪದಿಂದ ಜೀವರಿಗೆ ಸ್ನೇಹಕ್ಕೆ ಭಕ್ತಿ ವಿಶ್ವ, ಧ್ಯಾನ ತೈಜಸ, ಇಂದ್ರಿಯಾಭಿಮಾನ ರಾಹಿತ್ಯವೆಂಬ ಸುಖಪೂರಿತ ಮುಕ್ತಾವಸ್ಥಾ ಪ್ರಾಜ್ಞ ತೋರಿಸೆಂದು ಚಿಂತಿಸಲು ಇದೇ ಬೃಹದ್ಯಾಗ ಎನಿಸುವುದು ಮತ್ತು ಅವಸ್ಥಾ ತ್ರಯ ನಿಯಾಮಕನು ಪ್ರೀತನಾಗುವನು.

ತೈಜಸನಿಂದ ವಿಶ್ವನಲ್ಲಿ ಬಂದ ಕೂಡಲೇ ಪ್ರಾಣದೇವರು ನಿನ್ನೆ ಸೂರ್ಯೋದಯದಿಂದ ಈ ದಿನ ಸೂರ್ಯೋದಯದ ಪರಿಯಂತರ ಈ ಜೀವನಿಂದ ೨೧೬೦೦ ಹಂಸಮಂತ್ರ ಮಾಡಿ ಮಾಡಿಸಿದ್ದನ್ನು ಅರ್ಪಿಸಿ ದಾಸತ್ವದ ಸುಖ ಕೊಡು ಈ ಜೀವಗೆ ಎಂದು ಪ್ರಾರ್ಥಿಸುತ್ತಾರೆ ಮತ್ತೂ ಈ ದಿನ ಸೂರ್ಯೋದಯದಿಂದ ನಾಳಿನ ಸೂರ್ಯೋದಯದವರೆಗೂ ನಿನ್ನಾಜ್ಞೆಯಿಂದ ಶ್ವಾಸಮಂತ್ರಜಪ ಮಾಡಿಸುತ್ತೇನೆಂದು ಸಂಕಲ್ಪ ಮಾಡುತ್ತಾರೆ.(ಕಾರಣ ಇದು ಅತ್ಯವಶ್ಯ ನೆನಪಿನಲ್ಲಿಡಬೇಕು) ಇಲ್ಲದಿದ್ದರೆ ಸ್ವರೂಪನಾಶವೇ ಆಗುವುದು ಅಂತೇ ದೊಡ್ಡವರು "ಬೃಹತಿ ನಾಮಕ ವಾಸುದೇವನ ಮಹಿತರೂಪವ ನೆನೆದು ಮನದಲ್ಲಿ" ಎಂದು ನಿರೂಪಿಸಿದ್ದಾರೆ. ಎಲ್ಲಾ ನಾಶಗಳಲ್ಲಿ ಇದು ದೊಡ್ಡನಾಶ.

ತರುವಾಯ ತತ್ವೇಶರ ಎಚ್ಚರಿಕೆ - ಉತ್ತಮ ದೇವತೆಗಳಿಂದೊಡಗೂಡಿ ಅವರ ದೇವತೆಗಳಲ್ಲಿ ಬಂದಕೂಡಲೇ ಆಯಾ ದೇವತೆಗಳಿಗೆ ಎಚ್ಚರಿಕೆ ಮತ್ತು ತಮ್ಮ ಕಾರ್ಯಗಳ ನಿರ್ವಾಹ.

ತತ್ವೇಶರ ಪ್ರಾರ್ಥಿಸೋ ಕ್ರಮ--

೧. ಅವ್ಯಕ್ತ ತತ್ವಕ್ಕೆ ರಮಾದೇವಿಯರು- ಅಮ್ಮಾ! ಕರ್ಮಫಲ ಮತ್ತು ಅದರ ವಿಭಾಗದ ಅಧಿಕಾರ ಶ್ರೀಹರಿ ನಿನಗೆ ಕೊಟ್ಟಿದ್ದಾನೆ ಕಾರಣ ಬಹು ಜನ್ಮಗಳಿಂದ ಪ್ರಕೃತಿ ಬದ್ಧಿತನಾದ ನನ್ನ ಪ್ರಕೃತಿ ಬಂಧವನ್ನು ಬಿಡಿಸಿ ವಿಹಿತ ಫಲ ಕೊಟ್ಟು ನನ್ನನ್ನು ಬಹುದುಃಖ ಭವದಿಂದ ಕಾಯೆ. ಯಾಕೆಂದರೆ ನಿನಗೆ ಶ್ರೀಯರಸನು ಬಹುಪ್ರಿಯನು.

೨. ಮಹತ್ತತ್ವಕ್ಕೆ ಬ್ರಹ್ಮ ವಾಯುಗಳು - ಚಿತ್ತಾಭಿಮನಿ ಬ್ರಹ್ಮದೇವರಲ್ಲಿ ಪ್ರಾರ್ಥನೆ - ಮಹಾನುಭಾವ! ನೀನು ಚಿತ್ತಾಭಿಮಾನಿಯಾದ ಪ್ರಯುಕ್ತ ನನ್ನ ಚಿತ್ತ ಪರಮಾತ್ಮನಲ್ಲೇ ಸ್ಥಾಯಿಕವಾಗಿರುವಂತೆ ಮಾಡು. ಇದು ಇಲ್ಲದ್ದಕ್ಕೆ ಚಿತ್ತ ವಿಭ್ರಮನಾಗಿ ಅನೇಕ ಜನ್ಮಗಳನೆತ್ತಿರುವೆನು, ಕೃಪಾಮಾಡು ದಯದಿ ನೋಡು.

ಚೇತನಾಭಿಮಾನಿ ಪ್ರಾಣದೇವರಲ್ಲಿ ಪ್ರಾರ್ಥನೆ - ಪರಮ ಆಪ್ತನೇ! ನೀನು ಚೇತನಾಭಿಮಾನಿಯಾದ ಪ್ರಯುಕ್ತ ನನಗೆ ಚೇತನನೇಂಬೋ ಸ್ಮರಣೆಕೊಟ್ಟು ಪರಮ ಚೇತನನಾದ ಶ್ರೀಹರಿಯಲ್ಲಿ ಸ್ನೇಹಕೊಡು. ಅಪರವಾದ ವಿಜಾತಿಯಾದ ಬಂಧಕವಾದ ಜಡದಲ್ಲಿ ಇದ್ದ ಸ್ನೇಹ ಕಳೆದು ದಾಸನ್ನ ಮಾಡಿ ಸ್ವರೂಪಸುಖದ ಅಭಿವ್ಯಕ್ತಿ ಮಾಡು. ನೀ ಕೃಪಾಮಾಡದಿದ್ದರೆ ನನ್ನನ್ನು ಉಧ್ಧರಿಸುವರು ಯಾರು, ಪ್ರಭೋ ನಾನು ಚೇತನ - ನೀನು ಚೇತನ ಆದರೇ ನಿನ್ನ ಅವಕೃಪಾದಿಂದ ನಾನು ಚೇತನನೆಂಬೋದು ಮರೆತು ಅಚೇತನ ಪದಾರ್ಥಗಳಲ್ಲೇ ಸ್ನೇಹವುಳ್ಳವನಾಗಿದ್ದೇನೆ, ಕಾರಣ ಅದನ್ನೇ ಬಿಡಿಸಿ ಕಾಪಾಡು ಜಗದ್ಗುರು.

೩. ಅಹಂಕಾರ ತತ್ವಕ್ಕೆ ಗರುಡ, ಶೇಷ, ರುದ್ರರಲ್ಲಿ ಪ್ರಾರ್ಥನೆ - ಗರುಡ - ಹೇ ಮಹಾನುಭಾವ ನೀನು ಕಾಲಾಭಿಮಾನಿಯಾದ ಕಾರಣ ನನಗೆ ಕಾಲಕ್ಕನುಸರಿಸಿ ಬಂದೊದಗುವ ಸಂಯೋಗ - ವಿಯೋಗಗಳಿಂದ ವ್ಯತ್ಯಸ್ಥವಾಗದಂತೆ ಮಾಡು. ಇದು ಇಲ್ಲದಿದ್ದರೆ ವ್ಯಾಮೋಹಕ್ಕೊಳಗಾಗಿ ಅನೇಕ ದುಃಖ ಭರಿತ ಜನ್ಮಗಳ ತೆತ್ತಿರುವೆನು. ನಿನ್ನ ಕೃಪಾವ್ಯತಿರಿಕ್ತ ಇದು ಹೋಗದು, ಕಾರಣ ಉಧ್ಧರಿಸು.

ಶೇಷದೇವರು - ಸ್ವಾಮಿ! ಜೀವಾಂತರ್ಯಾಮಿಯಾಗಿ ಹೃದ್ಗತನಾದ ಶ್ರೀಶನನ್ನು ದ್ವಿಸಹಸ್ರ ಜಿಹ್ವೆಗಳಿಂದ ಸ್ತುತಿ ಮಾಡುತ್ತಿರುವೆ. ವೇದದ ರಹಸ್ಯಾರ್ಥಗಳನ್ನು ಬಲ್ಲವನು ನೀನೇ ಆದ ಕಾರಣ ನನಗೆ ವೇದದ ರಹಸ್ಯಾರ್ಥಗಳನ್ನರುಪಿ ಬಹು ಬೆಲೆಯುಳ್ಳ ಶ್ರೀಶನ ಸ್ತುತಿಯನ್ನು ಕೊಡು.

ರುದ್ರದೇವರು - ಸ್ವಾಮೀ! ನೀನು ಮನೋನಿಯಾಮಕ, ದಶೇಂದ್ರಿಯಗಳಲ್ಲಿ ಶ್ರೇಷ್ಠ ಮನಸ್ಸು , ಇಂಥಾ ಮನಸ್ಸಿಗೆ ನೀನು ಅಧಿಪತಿಯಾದ ಬಳಿಕ ದಶೇಂದ್ರಿಯಕೃತ ಕ್ರಿಯೆಗಳು ಶ್ರೀಹರಿಪರವಾಗುವಂತೆ ತಿದ್ದಿಬಿಡು. ಇದು ಬಿಟ್ಟು ನೀನು ಏನು ಕೊಟ್ಟರೂ ವಲ್ಲೆನು. ನನ್ನ ಈ ದಶೇಂದ್ರಿಯಗಳನ್ನು ಹರಿಯಲ್ಲಿ ತಿದ್ದಿ ವಿರಕ್ತಿ ಕೊಡಿರಿ.

೪. ಮನಸ್ತತ್ವ ಇಂದ್ರಕಾಮರು - ಮಹಾನುಭಾವರುಗಳಿರಾ ನನ್ನ ದಶೇಂದ್ರಿಯಗಳು ವಿಷಯ ಪರವಾಗಿ ನನ್ನನ್ನು ದಣಿಸುತ್ತಿವೆ. ಕಾರಣ ಇವುಗಳನ್ನು ಸ್ವಲ್ಪವಾದರೂ ಭಗವತ್ಪರ ಮಾಡಿ ನನ್ನ ಮನಸ್ ಚಾಂಚಲ್ಯ ಕಳೆಯಿರಿ. ಈ ಚಾಂಚ್ಸಲ್ಯ ಪರಿಹಾರವಾಗದೇಯಿದ್ದರೆ ನನಗೆ ಮನಸ್ಸಮಾಧಾನವಾಗದು. ಕಾರಣ ಕೃಪೆಮಾಡು.

೫. ತ್ವಗಭಿಮಾನಿ ಅಹಂಕಾರಿಕ ಪ್ರಾಣದೇವರು-ಇದರಲ್ಲಿ ಕರಣ, ಗುಣ,ಭೂತ.ಇವು ಮೂರು -ಕರಣ-ಇಂದ್ರಿಯಾಭಿಮಾನಿ ಅಹಂಕಾರಿಕ ಪ್ರಾಣ,ಗುಣ-ಸ್ಪರ್ಶಕ್ಕೆ ಅಭಿಮಾನಿ ಅಪಾನನಾಮಕ ಪ್ರಾಣದೇವರು ಭೂತ-ಪ್ರವಹವಾಯು. ಈ ಮೂರುಮಂದಿ ಕಲೆತರೆ ಒಂದು ಜ್ಞಾನೇಂದ್ರಿಯ ವ್ಯಾಪಾರವಾಗುತ್ತದೆ. ಐದು ಜ್ಞಾನೇಂದ್ರಿಯಕ್ಕೂ ಇದರಂತೆ ತಿಳಿಯತಕ್ಕದ್ದು.

ಪ್ರಕೃತದಲ್ಲಿ ಪ್ರಾರ್ಥಿಸೋ ಬಗೆ ಏನೆಂದ್ರೆ ಹೇ!ತ್ವಗಭಿಮಾನಿಗಳಿರಾ ನನ್ನಲ್ಲಿ ನೀವು ಈ ದಿನ ಸೂರ್ಯೋದಯದಿಂದ ಅಪರೋದಯದ ಪರಿಯಂತರ ಆಗುವ ಸ್ಪರ್ಶಾಸ್ಪರ್ಶ ಕ್ರಿಯೆಗಳು ನಿಮ್ಮವೇ ಎಂಬ ಅನುಸಂಧಾನ ಕೊಟ್ಟು ದುರ್ವಿಷಯಾಭಿಲಾಷೆ ಬಿಡಿಸಿರಿ. ನಿಮ್ಮ ಅವಕೃಪಾದಿಂದ ಪೂರ್ವೋಕ್ತ ಜ್ಞಾನರಹಿತನಾಗಿ ಬಹಳ ಜನ್ಮಗಳನ್ನೆತ್ತಿ ಬಹು ದುಃಖ ಪಟ್ಟಿದ್ದೇನೆ, ಕಾರಣ ಕೃಪಾಮಾಡಿ ಉದ್ದರಿಸಿರಿ.

೬. ಚಕ್ಷುವಿಗೆ ವಿವಸ್ವಾನ್ನಾಮಕ ಸೂರ್ಯ -
ಮಹಾನುಭಾವ ಈ ದಿನ ಸೂರ್ಯೋದಯದಿಂದ ಅಪರೋದಯದವರೆಗೂ ನೋಡಿಸುವ ಸಕಲರೂಪ ಆ ರೂಪಗಳಲ್ಲಿ ಶ್ರೀಪತಿಯ ಮೂರುತಿನೇ ನೋಡೊ ಭಾಗ್ಯ ದಯಪಾಲಿಸಿ. ಬ್ರಾಮಕವಾದ ದುಃಖದಾಯಕವಾದ ನರಕದ ಮಹಾದ್ವಾರವಾದ ವಿಷಯಭ್ರಾಂತಿ ಬಿಡಿಸಿರಿ. ಮುಖ್ಯವಾದ ಶ್ರೀಶನರೂಪ ಬಿಟ್ಟು ಅಮುಖ್ಯವಾದ ನಶ್ವರವಾದ ಭಾದಕವಾದ ಬಾಹ್ಯ ಜಡರೂಪದಲ್ಲಿ ಪ್ರಾಮುಖ್ಯತೆ ಇಟ್ಟು ಮೋಸಹೊಂದಿ ಭಯ ದುಃಖಪೂರಿತ ಜನ್ಮಗಳನ್ನೆತ್ತಿ ಅಪರಿಮಿತ ಬವಣೆ ಬಟ್ಟಿದ್ದೇನೆ.

ಕಾರಣ ಓ ಚಕ್ಷುರಭಿಮಾನಿ ಸೂರ್ಯನೇ! ನಿನ್ನನುಗ್ರಹದ ಹೊರ್ತು ಈ ವಿಷಯ ಭ್ರಾಂತಿ ಹೋಗದು. ಕಾರಣ ಕೃಪೆಮಾಡು ಕರುಣಾಕಟಾಕ್ಷದಿ ನೋಡು.

೭.ಶ್ರೋತ್ರಾಭಿಮಾನಿ ದಿಗ್ದೇವತೆಗಳಲ್ಲಿ - ಮಹಾನುಭಾವರೇ! ಶಬ್ದದಿಂದ ಬರೋದು ವಿಷಯ ಇದು ಬಂದಕೂಡಲೆ ಕೋಪ, ಇಂಥಾ ಕೋಪದಿಂದ ಅನೇಕ ದುಷ್ಕರ್ಮರೂಪ ಪಾಪಗಳು ಇದರಿಂದ ಅನೇಕ ಬವಣೆಯುಕ್ತ ಜನ್ಮಗಳು, ಇಂಥಾ ಜನ್ಮಗಳ ತೆತ್ತಿ ತೆತ್ತಿ ನನ್ನ ಶರೀರವು ಬೆಂಡಾಗಿ ಹೋಗಿರುವುದು. ನೀನು ನನ್ನ ಮೇಲೆ ಅವಕೃಪಾ ಮಾಡಿದ್ದಕ್ಕೆ ಅಜಾಂಡೋದರನು ಕಣ್ಣೆತ್ತಿ ನೋಡಲೊಲ್ಲನು. ಕಾರಣ ಮಹಾನುಭಾವರಾದ ಓ ಶ್ರೋತ್ರಾಅಭಿಮಾನಿಗಳಿರಾ ದುರನ್ವಯದ ಮೂಲಕ ಪಾಪವೇ ಕೋಪವಾಗಿ ಪರಿಣಮಿಸಿ ನನ್ನನ್ನು ಬಹುಭಾಧೆ ಪಡಿಸುತ್ತಿದೆ. ಕಾರಣ ಸಮನ್ವಯದ ಬಗೆಯನ್ನರುಪಿ ಅದನ್ನು ಅನುಷ್ಠಾನಕ್ಕೆ ಬರುವಂತೆ ಅನುಗ್ರಹ ಮಾಡಿರಿ. ಈ ದಿನದಲ್ಲಿ ಬರತಕ್ಕ ನನ್ನ ಕೊಪ ಕಳೆಯಿರಿ.

೮.ಜಿಹ್ವಾಭಿಮಾನಿ ವರುಣನಲ್ಲಿ ಪ್ರಾರ್ಥನೆ - ಮಹಾನುಭಾವನಾದ ವರುಣದೇವಾ~ ನೀನು ಧ್ಯಾನಕ್ಕೆ ಅಭಿಮಾನಿಯಾದ ಪ್ರಯುಕ್ತ ನನಗೆ ವಿಷಯ ಧ್ಯಾನ ಬಿಡಿಸಿ ಪರಮಾತ್ಮನ ಧ್ಯಾನ ಕೊಡು. ಇದು ಬರದೇ ಇರುವುದಕ್ಕೆ

ಮುಖ್ಯ ಅಡ್ಡಿ ಜಿಹ್ವಾಚಾಪಲ್ಯ. ಇದು ದೊಡ್ಡ ರೋಗ. ಈ ರೋಗಗ್ರಸ್ತನಾಗಿ ಬಹು ಜನ್ಮಗಳಲ್ಲಿ ಪರಿತಪಿಸಿ ಗಾಣದ ಎತ್ತಿನಂತೆ ಧರೆಯಮೇಲೆ ತಿರುಗುತ್ತಿದ್ದೇನೆ ಮುಂದಹರಿಯಗೊಡವಲ್ಲದು. ನನಗೆ ನಿಮ್ಮ ಕೃಪಾ ಆಗದಹೊರ್ತು ಈ ಜಿಹ್ವಾಚಪಲ್ಯನೇ ಹೋಗೋದಿಲ್ಲ ಕಾರಣ ಅನುಗ್ರಹಮಾಡಿರಿ.

೯.ಘ್ರಾಣಾಭಿಮಾನಿ ಅಶ್ವಿನಿದೇವತೆಗಳಲ್ಲಿ ಪ್ರಾರ್ಥನೆ - ಈ ದಿನದಲ್ಲಿ ಘ್ರಾಣೇಂದ್ರಿಯ ಕೃತ ಕಾರ್ಯಗಳು ನಿಮ್ಮ ದ್ವಾರ ಅರ್ಪಿತವಾಗುವುದೆಂಬ ನೈಜಮತಿ ಇತ್ತು ದುರ್ವಿಷಯ ವಾಸನೆಕೊಡದೆ ರಜಸ್ತಮೋ ಗುಣಯುಕ್ತವಾದ ಸಂಸಾರದಲ್ಲಿ ಸಂಚರಿಸಿದಾಗ್ಯೂ ತಲ್ಲೇಪನ ಆಗದಹಾಂಗೆ ಕರುಣಿಸಿರಿ. ದುರ್ವಿಷಯವಾಸನೆ ಆಸಕ್ತತೆಯಿಂದ ನಾನು ಯಾರು, ಏನು ಮಾಡಬೇಕು, ಎಲ್ಲಿಗೆ ಹೋಗಬೇಕು, ಎಲ್ಲಿಂದ ಬಂದೀನಿ ಅಂಬುವುದೇ ಮರೆತು ಬಿಟ್ಟೀನಿ. ಕಾರಣ ಉಧ್ಧಾರ ಮಾಡಿರಿ. ನೀವು ಮರೆತುಬಿಟ್ಟರೆ ಪುನಃ ದುಃಖದಾಯಕ ಜನ್ಮಗಳು ಬರುವುದೇ ನಿಶ್ಚಯ, ಕಾರಣ ದೀನನಾದ ನನ್ನ ಮೇಲೆ ದಯಾಮಾಡಿರಿ.

೧೦. ವಾಗಾಭಿಮಾನಿ ಅಗ್ನಿಯಲ್ಲಿ ಪ್ರಾರ್ಥನೆ - ಈ ದಿನ ನನ್ನ ವಾಕ್ಕಿನಲ್ಲಿ ನಿಂತು ಹಿತವನ್ನೇ ಆಡಿಸಿರಿ, ದುರ್ಭಾಷಣ ಆಡಿಸಬೇಡಿರಿ. ಈ ದುರ್ಭಾಷಣೆ ಅನೇಕ ದುಃಖದಾಯಕ ಜನ್ಮವೆತ್ತಲಿಕ್ಕೆ ಕಾರಣವಾಗಿದೆ. ನೀವು ಉದಾಸೀನ ಮಾಡಿದ್ದಕ್ಕಾಗಿಯೇ ಇಷ್ಟು ಜನ್ಮಗಳೆತ್ತಿ ಹಿತದ ದಾರಿಯನ್ನರಿಯದೆ ಪರಿತಪಿಸಿದ್ದೇನೆ. ಕಾರಣ ಓ ಮಹಾನುಭಾವನಾದ ಅಗ್ನಿಯೇ ಬಹು ಜನ್ಮಗಳಿಗೆ ಕಾರಣವಾದ ಈ ದುರ್ಭಾಷಣ ಬಿಡಿಸಿ ಸ್ವರೂಪ ಸುಖವನ್ನು ಅಭಿವ್ಯಕ್ತಿಗೊಳಿಸುವ ಹಿತನುಡಿಗಳನ್ನೇ ಆಡಿಸುತ್ತಾ ಕಾಪಾಡು ನನ್ನನ್ನು ಪ್ರಭೋ.

೧೧. ಪಾಣ್ಯಾಭಿಮಾನಿ ದಕ್ಷಪ್ರಜಾಪತಿಯಲ್ಲಿ ಪ್ರಾರ್ಥನೆ - ಈ ದಿನ ಮೂಲದಿಂದ ದಿನಾಂತ್ಯದವರೆಗೂ ನಡೆಯುವ ಕೊಡೋಣ-ಕೊಳ್ಳೋಣ ಮುಂತಾದ ವ್ಯಾಪಾರಗಳಲ್ಲಿ ವಿಪರೀತಮತಿ (ನಾಕರ್ತನೆಂಬೋದು) ಕೊಡದೆ ನಿನ್ನಲ್ಲಿ, ನಿನ್ನ ದೊರೆಯಲ್ಲಿ ಸರ್ವದಾ ನನ್ನನ್ನು ಕೃತಜ್ಞನಾಗಿರುವಂತೆ ಮಾಡು. ಸಜ್ಜನರ ಮೇಲೆ ಸರ್ವಥಾ ಕೈಮಾಡಿಸಬೇಡ, ಅಂದರೆ ಅಹಿತ ಮಾಡಿಸಬೇಡಾ. ತಾಡನಾದಿ ಕೃತ್ಯಗಳು ದುರ್ವಿಷಯ ಪರಿಗ್ರಹೇಚ್ಛಾ ಮೂಲಕ ತತ್ಕರ್ಮಾಚರಣೆಯು ಸ್ವಪ್ನದಲ್ಲಾದರೂ ಮಾಡಿಸಬೇಡ. ಅದರಲ್ಲಿ ಏಷ್ಟು ಹಾನಿಯಿದೆ ಅಂಬುವದು ಅನುಭವದಿಂದ ಕಂಡೀನಿ. ಕಾರಣ ಭಗವತ್ಪೂಜಾನುಸಂಧಾನಯುಕ್ತ ಕಾರ್ಯಗಳನ್ನೇ ಮಾಡಿಸುತ್ತಾ ಅಕೃತ್ಯಗಳಿಂದ ನನ್ನನ್ನು ಕಾಪಾಡುತ್ತಾ ನಾ ಕರ್ತನೆಂಬೋ ಅಭಿಮಾನ ನಿರಸನ ಮಾಡಿ ಸಂತೈಸು.

೧೨. ಪಾದಾಭಿಮಾನಿ ಜಯಂತನಲ್ಲಿ ಪ್ರಾರ್ಥನೆ - ಸ್ವಾಮಿ ಈ ದಿನ ಮೂಲದಿಂದ ದಿನಾಂತ್ಯದವರೆಗೆ ನಡೆಯುವ ಕರ್ಮಗಳ ಅಂದರೆ ಗಮನಾಗಮನ ವ್ಯಾಪಾರಗಳಲ್ಲಿ ತಿರುಗಿಸಿದರೂ ತಿರುಗಿಸುವವನು ನೀನೇ ಎಂಬ ಸ್ಮೃತಿಕೊಟ್ಟು ಅಮಾರ್ಗದಲ್ಲಿ ಮಾತ್ರ ಸರ್ವಥಾ ತಿರುಗಿಸಬೇಡ. ತಿರುಗಿಸುವುದೇ ನಿನ್ನ ಕಾರ್ಯವಾಗಿದ್ದರೆ ತೀರ್ಥಯಾತ್ರೆಗಳಲ್ಲಿ ಸಜ್ಜನರ ಸೇವೆಯಲ್ಲಿ ತಿರುಗಿಸು. ಅಮಾರ್ಗದಲ್ಲಿ ಚರಿಸಿದರೆ ಎಷ್ಟು ಬವಣೆ ಎಂಬುದನ್ನು ಅನುಭವದಿಂದ ಕಂಡಿದ್ದೇನೆ. ಆದರೆ ಸಜ್ಜನರ ಉದ್ಧಿಶ್ಯ ತಿರುಗಿದರೆ ಏನು ಲಾಭ ಅದೆ ಅಂಬುವುದು ನನಗೆ ಇತ್ತು ಕಾಪಾಡು.

೧೩. ಪಾಯ್ವಾಭಿಮಾನಿ ಮಿತ್ರಾನಾಮಕ ಸೂರ್ಯನಲ್ಲಿ ಪ್ರಾರ್ಥನೆ - ಈ ದಿನ ನಿನ್ನಾಜ್ಞೆಯಿಂದ ನಡೆಯುವ ಮಲೋತ್ಸರ್ಜನ ಅಪಾನವಾಯ್ವೋತ್ಸರ್ಜನ ಕಾರ್ಯಗಳಲ್ಲಿ ಕೃತಜ್ಞತಾಕೊಡು. ಓಂದು ವೇಳೆ ಆ ಕಾರ್ಯಗಳು ತಡೆದವು ಅಂದರೆ ಸಾಧನೆ ಎಷ್ಟು ವ್ಯಾಹತಿ ಆಗುತ್ತಿತ್ತು. ಇಂಥಾ ನಿಮ್ಮ ಅನಿಮಿತ್ಯ ಉಪಕಾರ ತಿಳಿಯದೇ ಮಲ ಸಹಿತವಾದ ಕಾರ್ಯಗಳಲ್ಲಿ ತೊಡಗಿ ಬಹು ಆಯಾಸ ಪಡುತ್ತಿದ್ದೇನೆ. ಕಾರಣ ಮಹಾನುಭಾವ! ಪಾಯ್ವಾಭಿಮಾನಿ ನನ್ನ

ಕರ್ಮಾಖ್ಯ ಮಲ ಕಳೆದು ಕಾಪಾಡು. ಈ ಮಲ ನಿವೃತ್ತಿ ಆಗೋತನಕ ದೇವರನ್ನು ವಿಷಯೀಕರಿಸುವುದಕ್ಕೆ ಅಡ್ಡಿ ಆಗಿರುವ ಮನೋಮಲ ಹೋಗದು. ಕಾರಣ ಕರುಣಾಕಟಾಕ್ಷದಿ ನೋಡು ಕೃಪಾಮಾಡು.

೧೪. ಉಪಸ್ಥಾಭಿಮಾನಿ ಸ್ವಾಯಂಭುವ ಮನುವಿನಲ್ಲಿ ಪ್ರಾರ್ಥನೆ - ಈ ದಿನ ನಡೆಯುವ ಮೂತ್ರೋತ್ಸರ್ಜನ, ರೇತೋತ್ಸರ್ಜನ ಕಾರ್ಯಗಳಲ್ಲಿ ನೀನು ಮಾಡುವ ಉಪಕಾರಗಳನ್ನು ಮನಸ್ಸಿಗೆ ಗ್ರಹಣ ಮಾಡುವಂತೆ ಮಾಡು. ನೀನು ಪರಮಾನುಗ್ರಹ ಮಾಡಿ ಈ ಕಾರ್ಯನಿರ್ವಾಹ ಮಾಡಿಸುತ್ತಿ, ಇಲ್ಲವಾದರೆ ವ್ಯತ್ಯಸ್ಥವಾಗಿ ಪ್ರಾಣಾಂತ್ಯದವರೆಗೂ ಅನಾಹುತಿ ಸಂಭವಿಸುತ್ತಿತ್ತು. ಕಾರಣ ನಿನ್ನಲ್ಲಿ ಬಹು ಕೃತಜ್ಞತಾ ಕೊಡು. ಇದು ತಿಳಿಯದೆ ಅನೇಕ ದುಷ್ಟ ಕಾಮಾದಿಗಳಲ್ಲಿ ಪ್ರವರ್ತನಾಗಿ ಬಹು ಜನ್ಮ ತೆತ್ತಿ ದಣಿದಿದ್ದೇನೆ. ದುಷ್ಟ ಸ್ತ್ರೀಯಾದಿಗಳಲ್ಲಿ ಕಾಮವೇ ನರಕಕ್ಕೆ ದ್ವಾರವೆನಿಸುವುದು. ಮುಕ್ತಿಪ್ರದಾಯಕವಾದ ಶ್ರೀಶನ ಧ್ಯಾನೋಪಾಸನೆಗೆ ಮುಖ್ಯವಾದ ಮೊದಲನೇ ವಿರೋಧವೇ ಇದು. ಕಾರಣ ಮಹಾನುಭಾವನಾದ ಸ್ವಾಯಂಭುವಮನುವೇ ನನ್ನನ್ನು ಸರ್ವವಿಧದಿಂದಲೂ ಈ ದುರ್ವಿಷಯದಿಂದ ಕಾಪಾಡು. ಕೃಪಾಸಾಗರ ನೀನು ಇಲ್ಲಿ ಈ ವ್ಯಾಳಕ್ಕೆ ಕೈಬಿಟ್ಟರೆ ನಾನು ಬಹು ನರಕಾದ್ಯನರ್ಥಗಳಿಗೆ ಗುರಿಯಾಗಿ ನಿನಗೂ ನಿನ್ನ ದೊರೆಗೂ ಬಹು ದೂರಾಗುವೆನು. ನನ್ನ ದೆಸೆಯಿಂದ ಇದೊಂದು ಅನುಗ್ರಹ ಮಾಡಿ ರಕ್ಷಿಸು ನನ್ನನ್ನು.

ಈ ಪ್ರಕಾರ ತತ್ವೇಶರಿಗೆ ಪ್ರಾರ್ಥನಾ ಮಾಡಿ- "ನಮೋಸ್ತು ತಾತ್ವಿಕಾ ದೇವಾಃ ವಿಷ್ಣು ಭಕ್ತಿ ಪರಾಯಣಾ|
ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವ ಏವಹಿ||"

ಈ ಅಭಿಪ್ರಾಯದ ಅನುಸಂಧಾನದಿಂದ ಏಳಬೇಕು.

ಎಲ್ಲಿ ತನಕ ನಿದ್ರೆ ಇದೆಯೋ ಅಲ್ಲಿ ತನಕಾನೇ ಸ್ವಪ್ನ , ಎಲ್ಲಿಗೆ ಜಾಗೃತೆ ಆಯಿತೇ ಅಲ್ಲಿಗೆ ಸ್ವಪ್ನ ಹೋಯಿತು. ಅದರಂತೆ ಎಲ್ಲಿ ತನಕ ಅಜ್ಞಾನವಿದೆಯೋ ಅಲ್ಲಿಯ ತನಕಾನೇ ಸಂಸಾರ. ಎಲ್ಲಿಗೆ ಜ್ಞಾನೋದಯ ಅಂದರೆ - ಹರಿ ತತ್ವೇಶರೊಂದಿಗೆ ಸಕಲ ಕಾರ್ಯ ಸ್ವ,ಪರ ದೇಹಗಳಲ್ಲಿ ನಿಂತು ಮಾಡುತ್ತಾನೆಂದು ಅನುಭವವಾಗುವುದೋ ಅಂದೇ ಸಂಸಾರವು ನಿಂತಿತು.

ಈ ಅಜ್ಞಾನಕ್ಕೆ ಮೂಲ ಕರ್ತೃತ್ವ, ಭೋಕ್ತೃತ್ವ ಸ್ವಾಮಿತ್ವಾಭಿಮಾನ, ಇವು ತ್ಯಾಗಮಾಡಿ ಆತನಿಗೊಪ್ಪಿಸೋಣ ಇದೇ ಕರ್ಮಫಲಾರ್ಪಣೆ ಎನಿಸುವುದು ಮುಖ್ಯ ಮಾಡತಕ್ಕದ್ದು.

ಇದಕ್ಕೆ ಅಜ್ಞಾನಬಾರದಂತೆ ದೃಢವಾದ ನಂಬಿಕೆಯಿಂದ ನಿರಂತರ ಪ್ರೇಮದಿಂದ ಸಾವಧಾನ ಯುಕ್ತನಾಗಿ ಏಕಮನಸ್ಸಿನಿಂದ ಆತನ ವ್ಯಾಪಾರ ತಮ್ಮಲ್ಲಿ ನಡೆದವು, ನಡೆಯುವವ ಇಂದ್ರಿಯ ವ್ಯಾಪಾರ ಕಾಲಕಾಲದಿ ಆತನವೇ ಎಂದು ಚಿಂತಿಸಬೇಕು.

ಇದಕ್ಕೆ ಮುಖ್ಯ ಮಾಡತಕ್ಕದ್ದು ಮೂರು ೧.ರೂಪೋಪಾಸನೆ ೨. ಗುಣೋಪಾಸನೆ ೩. ಕ್ರಿಯೋಪಾಸನೆ

ದೇಹಗಳಲ್ಲಿ ದೇವರ ಚಿಂತನೆ

ಸ್ವರೂಪ ದೇಹದಲ್ಲಿ ಬಿಂಬ ನರಸಿಂಹದೇವರು

ಮೊದಲು ಯೋಗ್ಯ ಗುರುಗಳಲ್ಲಿ ಭಕ್ತಿ ಮಾಡಿ ತನಗಿಷ್ಟವಾದ ಗುರೂಕ್ತ ದೇವರ ಪ್ರತಿಮಾವನ್ನು ಹೃತ್ಕಮಲದಲ್ಲಿ ನಿಲ್ಲಿಸಿ ಪಾದಾರಂಬಿಸಿ  ಶಿರ ಪರ್ಯಂತರ ಭೂ ದುರ್ಗಾದೇವಿಯರಿಂದ ಸೃಷ್ಟಮಾಡು ಎಂದು ಸ್ತೋತ್ರ ಮಾಡಿಸಿಕೊಂಡು ತನ್ನ ಇಚ್ಛಾ ಕ್ರಿಯಾ ಜ್ಞಾನಗಳು ಇವನ ಇಚ್ಛಾ ಕ್ರಿಯ ಜ್ಞಾನಗಳನ್ನನುಸರಿಸಿಕೊಂಡು ಕೆಲಸ ಮಾಡಿಸುತ್ತಾನೆ.

ನಾನು ದಾಸನು - ಆತಬಿಂಬನು, ನಾಅಲ್ಪನು-ನೀನು ಪೂರ್ಣನು, ನಾ ಕಪಟಿ- ನೀ ಕರುಣಾಳು, ನಾ ಕೃತಘ್ನ - ಆತ ಮಹೋಪಕಾರಿ, ನಾ ದೋಷಕಾರಿ- ಆತ ನಿರ್ದೋಷನು, ನಾನು ದುಃಖಭರಿತ-ಆತ ಸುಖಪೂರ್ಣ, ನಾ ಅಜ್ಞಾನಿ-ಆತ ಜ್ಞಾನಪೂರ್ಣ, ನಾ ಅಸ್ವತಂತ್ರ-ಆತ ಸರ್ವಸ್ವತಂತ್ರ, ನಾನು ಅನಾದಿ ಭೃತ್ಯ-ಆತ ಸ್ವಾಮಿ, ನಾನು ದೀನ-ಆತ ದಾನಿ ಎಂದು ತಿಳಿದು ಗುಣೋಪಾಸನಾ ಮಾಡುತಾ ಮಾಡುತಾ ಇರುವದೇ ಸ್ವರೂಪ ದೇಹದ ವ್ಯಾಪಾರ ಇಂಥಾ ನಾರಸಿಂಹ ನಾಮಕನು ಸ್ವರೂಪದೇಹದಲ್ಲಿ ನಿತ್ಯದಿ ಜೀವರಿಗೆ ಬರುವ ಅಪಮೃತ್ಯುವಿನಿಂದ ಸಂರಕ್ಷಿಸುತ್ತಾ ಇರುತ್ತಾನೆ.

ಲಿಂಗದೇಹ ಚಿಂತನಾ - ಪುರುಷನಾಮಕ ಹರಿ (ಇದು ಕರ್ಮದ ತವರುಮನೆ) ತ್ರಿಗುಣಾತ್ಮಕವಾದ ತೇಜೋಮಯ ಜೀವರ ಅನಾದಿ ಇರತಕ್ಕ ದೇಹ ಯಾವಃಜೀವ ಇರುತ್ತಾನೆ ಅದೇ ಆವರ್ತ ಮೊದಲನೆಯದು. ಇಲ್ಲಿ ಪುರುಷನಾಮಕ ಪರಮಾತ್ಮನಿದ್ದು ಭೂ ಸಮೇತನಾಗಿ ಬ್ರಹ್ಮ, ಸರಸ್ವತಿ, ವಾಯು, ಭಾರತಿ ಇವರಿಂದ ಸೇವಾ ತೊಗೋತ್ತಾನೆಂದು ಚಿಂತನೆ ಮಾಡಿ, ಕಂದೀಲು ಪಾವು ಹಸಿರಾಗಿದೆ ಹೊರತು ಕಂದೀಲು ಹಸಿರಲ್ಲಾ, ಅದರಂತೆ ಅನಾದಿಕಾಲದಿಂದ ಲಿಂಗದೋಷದಿಂದ ಜೀವನು ಮಲಿನನಾಗಿದ್ದಾನೆ ಇದು ಕಳೆದುಕೊಳ್ಳಬೇಕಾದರೆ ಸಾಧುಗಳ ಸೇವೆಯು, ಅವರಿಂದ ಆಗತಕ್ಕ ಪರಮಾತ್ಮನ ಮಹಿಮಾಖ್ಯ ಅಮೃತಧಾರೆಯ ಶ್ರವಣ ಮನನಾದಿಗಳು ತದ್ವಾರ ಭಗವಂತನ ಪ್ರಸಾದ.

ಅವ್ಯಕ್ತ ದೇಹ - ಜನಾರ್ದನ
ಇಲ್ಲಿ ಆಚ್ಛಾದಿಕಾ ದ್ವಯಗಳು ಜೀವಾಚ್ಛಾದಿಕ, ಪರಮಾಚ್ಛಾದಿಕ. ಮುಂದೆ ನಡೆಯುವ ಕಾರ್ಯ ಗೊತ್ತಾಗುವುದಿಲ್ಲ. ಇದರಿಂದ ಪಿಶಾಚಿಗ್ರಸ್ಥನ ಮಾತಿನಂತೆ ದೇವರನ್ನು ಮರೆತು ನಮ್ಮ ಸ್ವಾತಂತ್ರ್ಯ ತಿಳಿದುಕೊಳ್ಳುವುದಕ್ಕೆ ಕಾರಣವಾಗುವುದು.

ಅನಿರುದ್ಧ ದೇಹ ವಿಚಾರ- ಶಾಂತಿಪತಿ ಅನಿರುದ್ಧ.
ಇದು ತತ್ವದೇವತೆಗಳು, ತತ್ವ ದೈತ್ಯರು ಇರತಕ್ಕ ಮನಿ ಎಂದು ಚಿಂತಿಸಬೇಕು.

ಸ್ಥೂಲದೇಹ ವಿಚಾರ -
ಮೂರುವರೆ ಕೋಟಿ ರೋಮಕೂಪಗಳು ತ್ರಿಕಕುದ್ಧಾಮನೆಂಬ ದೇವರು ಇರುತ್ತಾನೆ. ೭೨೦೦೦ ನಾಡಿಗಳು ಅದರಲ್ಲಿ ಮುಖ್ಯ ನಾಡಿಗಳು ೧೦೧ ಅದರಲ್ಲಿ ಪರಮ ಮುಖ್ಯ ಇಡಾ, ಪಿಂಗಳಾ, ಸುಷುಮ್ನಾ, ೨೪ ತತ್ವಗಳು, ಪಂಚಕೋಶಗಳು , ತ್ರಿಗುಣಗಳು ಈ ಸ್ಥೂಲದೇಹದಲ್ಲಿದೆ.

೧. ಸುಷುಮ್ನಾ ನಾಡಿಯಲ್ಲಿ ಸರಸ್ವತಿಯು ಬ್ರಹ್ಮಾಂತರ್ಗತ ವಿಶ್ವನನ್ನು ಉಪಾಸನೆ ಮಾಡುತ್ತಾ ಇರುತ್ತಾಳೆ.

೨. ಪಿಂಗಳಾ ನಾಡಿಯಲ್ಲಿ ಯಮುನೆಯು ವರುಣಾಂತರ್ಗತ ತೈಜಸನನ್ನು ಉಪಾಸನೆ ಮಾಡುತ್ತಿರುತ್ತಾಳೆ.

೩. ಇಡಾ ನಾಡಿಯಲ್ಲಿ ಭಾಗೀರಥಿಯು ವರುಣಂತರ್ಗತ ಶ್ರೀ ಪ್ರಾಜ್ಞನನ್ನು ಉಪಾಸನ ಮಡುತ್ತಿರುತ್ತಾಳೆ.

ಕಮಲಗಳ ವಿಚಾರ

೧.ತುಂದಿಯಲ್ಲಿದ್ದ ಚತುರ್ದಳ ಕಮಲದಲ್ಲಿ- ಸ್ವಾಯಂಭುವಮನುವು ಶಾಂತಿಪತಿ ಅನಿರುದ್ದನನ್ನು ಉಪಾಸನಾ ಮಾಡುತ್ತಿರುತ್ತಾನೆ.

೨.ನಾಭಿಯಲ್ಲಿದ್ದ ಷಟ್ದಳ ಕಮಲದಲ್ಲಿ - ಗಣಪತಿ ಜಾಂಬವತಿ ಮೊದಲಾದ ಷಣ್ಮಹಿಷಿಯರು ಕೃತಿಪತಿ ಪ್ರದ್ಯುಮ್ನನನ್ನು ಉಪಾಸನಾ ಮಾಡುತ್ತಿರುತ್ತಾರೆ.

೩.ಮಧ್ಯೋದರದಲ್ಲಿದ್ದ ದ್ವಾದಶಾರ್ಕರ ಡಲದಲ್ಲಿ - ದಿವಾರಾತ್ರಿ ಅಭಿಮಾನಿಗಳು ತತ್ತನ್ನಾಮಕ ಭಗವದ್ರೂಪಗಳನ್ನು ಉಪಾಸನೆ ಮಾಡುತ್ತಾರೆ.

೪.ಹೃದಯಗತ ಅಶ್ವದಳ ಕಮಲದಲ್ಲಿ ಸ್ಕಂದೇಂದ್ರರೇ ಮೊದಲಾದ ಎಂಟು ಮಂದಿ ದಳಾಭಿಮಾನಿಗಳು ಮೂಲೇಶ, ಪ್ರಾದೇಶ, ಅಗ್ರೇಶಾಭಿನ್ನ ಜಯಪತಿ ಸಂಕರ್ಷಣನನ್ನು ಉಪಾಸನೆ ಮಾಡುತ್ತಿರುತ್ತಾರೆ.

೫.ಉರಸ್ಸಿನಲ್ಲಿ ದ್ವಾದಶದಳ ಕಮಲದಲ್ಲಿ - ಉಮಾಪತಿಯು ಶ್ರೀಹರಿಯನ್ನು ಉಪಾಸನೆ ಮಾಡುತ್ತಾನೆ.

೬. ಕಂಠದಲ್ಲಿ ಷೋಡಶದಳ ಕಮಲದಲ್ಲಿ - ವಾರುಣೀಯುತರದಾ ಶ್ರೀಶೇಷದೆವರು ಶ್ರೀಮನ್ನಾರಾಯಣನನ್ನು ಉಪಾಸನೆ ಮಾಡುತ್ತಾರೆ.

೭.ಭ್ರುಮಧ್ಯದಲ್ಲಿದ್ದ ದ್ವಿದಳ ಕಮಲದಲ್ಲಿ - ಸೌಪರ್ಣಿಯಿಂದೊಡಗೂಡಿದ ಗರುಡದೇವರು ಶ್ರೀಕೃಷ್ಣನನ್ನು ಉಪಾಸನೆ ಮಡುತ್ತಾರೆ.

೮.ಬ್ರಹ್ಮರಂಧ್ರದಲ್ಲಿ ಸಹಸ್ರದಳ ಕಮಲದಲ್ಲಿ - ರಮಾಬ್ರಹ್ಮಾದಿ ಸಕಲದೇವತೆಗಳು ವಾಸುದೇವಾಭಿನ್ನ ತ್ರಿವಿಕ್ರಮನಾದ ವಿಶ್ವಾದಿ ಸಹಸ್ರರೂಪಗಳನ್ನು ಉಪಾಸನೆ ಮಾಡುತ್ತಾ ಇರುತ್ತಾರೆ.

ಇಷ್ಟು ಚಿಂತಿಸಿದರೆ ನಿಶ್ಚಯವಾಗಿ ಭಗವದನುಗ್ರಹ ಆಗುತ್ತದೆ. ಅನಂತರ ಭವದೊಳಿದ್ದರೂ ಭಾದಿಸವು ದುರಿತರಾಶಿಗಳು. ಇವೆಲ್ಲಾಕ್ರೋಢೀಕರಿಸಿ ಶ್ವೇತದ್ವೀಪ , ಅನಂತಾಸನದಲ್ಲಿದ್ದ ದೇವರು ಶೇಷಗಿರಿಯಲ್ಲಿ ಬಂದಾನೆ..... ಅದೇ ಶ್ರೀನಿವಾಸನೆ ವಾಯುದೇವರು,ರುದ್ರದೇವರು,ಮಂತ್ರಾಲಯ ರಾಯರು,ವರದೇಂದ್ರ ಸ್ವಾಮಿಗಳು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಪ್ರಾಣೇಶದಾಸರು, ಗುರುಪ್ರಾಣೇಶದಾಸರು ಇವರುಗಳ ದ್ವಾರ ನನ್ನ ಹೃದಯಕ್ಕೆ ಬಂದಾನೆಂದು ಚಿಂತಿಸಬೇಕು. ಮೊದಲು ಶಿರಸ್ಸಿನಲ್ಲಿರತಕ್ಕ ದೇವರ ಪಾದಜನಿತ ಭಾಗೀರಥಿ (ಗಂಗಾ)ಇಡಾದಲ್ಲಿ, ಸರಸ್ವತಿ ಸುಷುಮ್ನಾದಲ್ಲಿ, ಯಮುನೆಯು ಪಿಂಗಳಾದಲ್ಲಿ ಈ ಪ್ರಕಾರ ನದಿಗಳು ಮೂರು ದ್ವಾರದಿಂದ ಬಂದು ಮೂಲೇಶನ ಪಾದಮೂಲದಲ್ಲಿ ಸಂಗಮವಾಗುತ್ತದೆ. ಇದೆ ಪ್ರಯಾಗ ಕ್ಷೇತ್ರ ವೆನಿಸುವುದು. ದಿವ್ಯ ಸುವರ್ಣಮಯವಾದ ಸೋಪಾನಗಳು ಅಲ್ಲಲ್ಲಿ ಅನುಷ್ಠಾನಕ್ಕೆ ಕೂಡತಕ್ಕ ಸ್ಥಳಗಳು, ತುಳಸಿ ವನಗಳು,

ಚಂಪಕ,ಬಕುಳಾ, ಸೇವಂತಿಕಾ, ಕೇತಕಿ,ಮಲ್ಲಿಗೆ ಮೊದಲಾದ ಸುಗಂಧಯುತ ಪುಷ್ಪಗಳು ನಮ್ಮನ್ನು ಯಾವಾಗ ಶ್ರೀಶನ ಪೂಜೆಗೆ ಉಪಯೋಗಿಸಿಯಾರು ಎಂದು ಕಾತುರ ಪಡುತ್ತಿರುತ್ತವೆ. ಇಂಥಾ ಪ್ರಯಾಗ ಕ್ಷೇತ್ರದಲ್ಲಿ ಬಲಭಾಗದಲ್ಲಿ ಸಕಲದೇವತೆಗಳು, ಎಡಭಾಗದಲ್ಲಿ ಶ್ರೀಮದಾಚಾರ್ಯರಾರಂಭಿಸಿ ಸ್ವಗುರು ಪರ್ಯಂತ ಗುರುವೃಂದ ಈ ವೃಂದದ್ವಯದಿಂದ ಯುಕ್ತನಾಗಿ ಅತಿನೀಲ ಘನಶ್ಯಾಮ ನಳಿನಯತ ಲೋಚನ ಸ್ನಾನ ಮಾಡುವ ಕಾಲಕ್ಕೆ "ನಮೋ ನಾರಾಯಣಾಯ" ಎಂದು ೧೦೮ ಆವರ್ತಿ ಚಿಂತಿಸಬೇಕು. ಅಂದರೆ ರೋಗಾದಿ ದೋಷಗಳು ಹೋಗುತ್ತವೆ. ಹಾಗೂ ವಾಸುದೇವ, ಅಚ್ಯುತ, ಅನಂತ, ಗೋವಿಂದ, ಗರುಡದ್ವಜ, ಮುರಾರೆ, ನಾರಸಿಂಹ, ಪದ್ಮನಾಭ, ಜನಾರ್ದನ ಈ ಒಂಭತ್ತು ರೂಪ ಚಿಂತಿಸಿ ಸ್ನಾನ ಮಾಡಬೇಕು. ಅಂದರೆ ಕಾಯಿಕ, ವಾಚಿಕ, ಮಾನಸಿಕ ಮಲಗಳು ತ್ರಯಜನ್ಯ ಮಲ, ಅವಸ್ಥಾತ್ರಯದಲ್ಲಿ ಬಂದ ಮಲ ಈ ಪ್ರಕಾರ ಮಲ ಓಂಭತ್ತು ದ್ವಾರದಿಂದ ಹೋಗಿ ಶ್ರೀಶನ ಅವಾಸಕ್ಕೆ ಯೋಗ್ಯವಾಗುತ್ತದೆ. ಇದೇ ಈ ರೀತಿ ಚಿಂತನಾ ಜನಿತವಾದ ಧ್ಯಾನ ಸ್ನಾನ ಮಾಡಿದರೆ ಆನಂದವಾಗಿ ಅಪಮೃತ್ಯು ಮೊದಲಾದವುಗಳು ಪರಿಹಾರವಾಗುವುದು ಅನುಭವದಿಂದ ಕಂಡಿದೆ. ಈ ಸ್ನಾನದಿಂದ ಕಾಣಲರದೆ ಇದ್ದ ಮನೋ,ಬುದ್ದಿ,ಇಂದ್ರಿಯ ಮಲವು ಹೋಗುವುದೆಂದು ಜಗದ್ಗುರುಗಳಾದ ದ್ವಾತ್ರಿಂಶತಿ ಲಕ್ಷಣ ಸಂಪನ್ನರಾದ ಶ್ರೀಮದಾನಂದತೀರ್ಥರೇ ನಿರೂಪಿಸಿರುವರು.

ನಂತರ ತಮ್ಮ ಗುರುಗಳಿಗೆ ಬೇಕಾದ ಪೂಜಾ ಸಾಮಗ್ರಿ ಒದಗಿಸಿ ಕೊಡೋಣವೇ ಇವನ ಆನ್ಹಿಕ. ನಂತರ ಸಂಧ್ಯಾವಂದನಾ, ಸೂರ್ಯನಾರಾಯಣನಿಗೆ ಅರ್ಘ್ಯ ಸಕಲ ಕರ್ಮಗಳು ನನ್ನಲ್ಲಿ ನಡೆದವು ನನ್ನದಲ್ಲಾ ನಿನ್ನವು ಅಂತ ತೋರಿಸೋ ಅರ್ಘ್ಯ. ನಂತರ ಗುರುಮಂತ್ರ, ತತ್ವನ್ಯಾಸ ಮತೃಕಾನ್ಯಾಸ, ಕಾಲರೂಪದಿಂದ ಹೊರಗಡೆ ನಡೆದ ಕರ್ಮಗಳು ಪುರುಷನಾಮಕನಲ್ಲಿ ಅನ್ವಯಿಸೋಣ, ಹಂಸಮಂತ್ರ, ನಾರಾಯಣ ಅಷ್ಟಾಕ್ಷರ ಮಂತ್ರ, ಕೃಷ್ಣಾಷ್ಟಕ ಮಂತ್ರ ಜಪ,ಗಾಯತ್ರಿ ಉಪಾಸನಾ ಧೀರ್ಘ ನಮಸ್ಕಾರ, ಬ್ರಹ್ಮ ಯಜ್ಞ ಮೊದಲಾದವುಗಳನ್ನು ಮುಗಿಸಿಕೊಳ್ಳಬೇಕು.

ಬಲಭಾಗದಲ್ಲಿ ಬ್ರಹ್ಮಾದಿ ತಾತ್ವಿಕ ದೇವತೆಗಳು ಎಡಭಗದಲ್ಲಿ ಶ್ರೀಮದಾಚಾರ್ಯರಾರಂಭಿಸಿ ಸ್ವಗುರುಗಳವರೆಗೆ ಜತ್ತಜತ್ತಾಗಿ ಉಭಯರು ಕುಳಿತು ತಮ್ಮ ತಮ್ಮ ಯೋಗ್ಯತನುಸಾರ ಬಿಂಬೋಪಾಸನ ಮಾಡುತ್ತಿರುತ್ತಾರೆ. ನಡುವೆ ಗುರು ಪುಷ್ಕರ, ಶನೈಶ್ಚರ, ನಾರದರು, ಮನೋನಿಯಾಮಕರು, ಭಾರತೀದೇವಿಯರು, ಮುಖ್ಯಪ್ರಾಣದೇವರು ಇಷ್ಟು ಮಂದಿ ದೇವರಪೂಜಾ ವಿಷಯ ಬೇಕಾದ ಪದಾರ್ಥಗಳನ್ನು ಒದಗಿಸಲಿಕ್ಕೆ ಸಿದ್ದರಿರುತ್ತಾರೆ. ಪ್ರಾಣದೇವರ ಮೇಲ್ಭಾಗದಲ್ಲಿ ದುರ್ಗದೇವಿಯು ದೇವರ ಸಮ್ಮುಖದಲ್ಲಿ ಪೂಜಾ ಮಾಡಲಿಕ್ಕೆ ಸಿದ್ದಳಾಗಿ ನಿಂತಿದ್ದಾಳೆ. ದಳ ಅಷ್ಟವುಳ್ಳ ರಕ್ತಾಂಬುಜ ಪೊಳೆವ ಕರ್ಣಿಕೆ ಮೇಲೆ ಮಂಡಲ ತ್ರಯ, ನೀಲವಾದ ಬಂಗಾರದ ಗದ್ದುಗೆ ಮೇಲೆ ಸುರತರು ನೆಳಲು ಕೆಳಗೆ ಫಣಿಮಂಚದ (ಘನೀಮಂಚದ) ಮನೋಹರ ಹಾಸಿಗೆ ಮೇಲೆ ಶ್ರೀದೇವಿ, ಭೂದೇವಿಯರೊಡಗೂಡಿ ಕೋಟಿ ಮನ್ಮಥ ಲಾವಣ್ಯ ಪ್ರಭೆಯುಳ್ಳವನಾಗಿ ಚಿತ್ರವಿಚಿತ್ರವಾದ ಆಭರಣಗಳಿಗೇನೇ ಶೋಭಾಕೊಡುವ ಉದ್ಧಿಶ್ಯವಾಗಿ ಧರಿಸಿ ಶರಣಾಗತರಾದ ಭಕ್ತರನ್ನು ಉದ್ಧಾರ ಮಾಡುವೆನೆಂಬ ಕಾತುರತೆಯನ್ನು ಮುಖದಿಂದ ಬೀರುತ್ತಾ ತನ್ನವರ ದ್ವಾರಾ ತನ್ನಲ್ಲಿ ಭಕ್ತಿ ಮಾಡುವ ಸುಜೀವರನ್ನು ಅರಘಳಿಗೆ ಸಹಾ ಬಿಟ್ಟಿರನೆಂದು ಹೊಗಳಿಸಿಕೊಳ್ಳುತ್ತಾ ಆ ಸಿಂಹಾಸನದ ಮೇಲೆ ವಿರಾಜಮಾನನಾಗಿ ಕಿಲಕಿಲಾ ನಗುತ್ತಾ ಕುಳಿತಿರುವವನೇ ಸಮಸ್ತರ ಬಿಂಬನು.

ಈತನನ್ನೇ ದುರ್ಗಾದೇವಿಯು ಷೋಡಶೋಪಚಾರ ಪೂಜಾ ಮಡುತ್ತಾಳೆ. ಬ್ರಹ್ಮ, ಸಮೀರ,ವಾಣಿ,ಭಾರತಿ,ಗರುಡ,ಶೇಷ,ರುದ್ರ,ಸ್ಕಂದೇಂದ್ರ ಮೊದಲಾದ ದೇವತೆಗಳು ಚಿತ್ರವಿಚಿತ್ರ ಸ್ತೋತ್ರ

ಮಾಡುತ್ತಿರುತ್ತಾರೆ. ಆ ಸ್ತೋತ್ರದ ಬಗೆ ಹೇಗೆಂದರೆ- ಎಲೈ ನೀರಜಭವಾಂಡೋದಯ ಸ್ಥಿತಿ ಕಾರಣನೆ ಕೈವಲ್ಯದಾಯಕನಾದ ಓ ನಾರಸಿಂಹ ನಮಗೂ, ನಮ್ಮಂತರ್ಗತನಾದ ನಿನ್ನನ್ನು ನಂಬಿದ ನಮ್ಮ ಅನುಯಾಯಿಗಳಿಗೂ ಮಂಗಳವ ಕೊಡು, ಅಮಂಗಳ ವಿಷಯ ಬಿಡಿಸು.

ಷೋಡಶೋಪಚಾರ ಪೂಜಾದ ವಿವರ -

೧.ಆವಾಹನೆ- ಸರ್ವತ್ರದಲ್ಲಿ ಮಾಡೋ ವ್ಯಾಪಾರ ನೋಡಿ ನಮ್ಮ ಬಿಂಬನವೇ ಎಂದು ಅನ್ವಯಿಸೋಣ.

೨.ಆಸನಾ-ಹೀಗೆ ಅನ್ವಯಿಸಿದ್ದನ್ನು ದೃಢವಾಗಿ ನಿಲ್ಲಿಸೋಣವೇ ಆಸನಾ

೩.ದೀಪ-ಜ್ಞಾನ ಸಂಪಾದಿಸೋಣವೇ ದೀಪ

೪.ಪಾದ್ಯ-ಮನೋವೃತ್ತಿ ಕರಗಿಸೋಣಾವೇ ಪಾದ್ಯ

೫.ಅರ್ಘ್ಯ-ಕರಗಿದ್ದು ಕೊಡೋಣವೇ ಅರ್ಘ್ಯ

೬.ಮಧುಪರ್ಕ-ಸರ್ವತ್ರ ಸ್ವಚ್ಛವೃತ್ತಿ ಇರೋಣ ಅಂದರೆ ಯಾವುದು ನೋಡಿದರೂ ಅನಂದವೇ ಬಡಬೇಕು

೭.ಸ್ನಾನ-ಪರಮಾತ್ಮನ ವ್ಯಾಪ್ತಿ ತಿಳಿಯೋಣವೇ ಸ್ನಾನ

೮.ವಸ್ತ್ರ-ಭಗವತಿ ವಿಸ್ಮೃತಿ ಇಲ್ಲದಿರೋಣವೇ ವಸ್ತ್ರ

೯.ಉಪವೀತ-ಪರಮತ್ಮನ ಇರುವಿಕೆ ತಿಳಿಯೋಣವೇ ಉಪವೀತ

೧೦.ಗಂಧ-ಸರ್ವದಾ ಉಪಕಾರ ಬುದ್ಧಿ ಮಾಡೋಣವೇ ಗಂಧ

೧೧ಅಕ್ಕತಾ-ಜೀವೇಶ ಭೇದ ತಿಳಿಯೋಣವೇ ಅಕ್ಷತಾ

೧೨ಪುಷ್ಪ-ಅಹಿಂಸಾ ಗುಣದಿಂದಿರೋಣವೇ ಅಕ್ಷತಾ

೧೩.ಧೂಪ-ಕೋಪ ಬಿಡೋಣವೇ ಧೂಪ

೧೪.ನೈವೇದ್ಯ-ಕರ್ಮ ಸಮರ್ಪಣೆಯೇ ನೈವೇದ್ಯ

೧೫.ಮಂಗಳಾರತಿ, ನೀರಾಜನ-ಆರ್ತನಾಗಿ ದೇವರ ಗುಣ ಕೀರ್ತನೇ ಮಂಗಳಾರ್ತಿ ನೀರಾಜನ

೧೬.ಪ್ರದಕ್ಷಿಣೆ ನಮಸ್ಕಾರ-ಕರ್ಮಗಳಲ್ಲಿ ತಿರುಗಿದರೂ ದೇವರು ತಿರುಗಿಸುತ್ತನೆಂದು ನಂಬಿ ಅದದ್ದಕ್ಕೆ ಒಪ್ಪೋಣವೇ ಪ್ರದಕ್ಷಿಣೆ ನಮಸ್ಕಾರ.

ಈವು ಗುಪ್ತವಗಿ ಮಾಡೋ ಕೆಲಸ ಇದಕ್ಕೆ ಬಹ್ಯಪದಾರ್ಥ ಉಪಯೋಗವಿಲ್ಲ. ಈ ದಿನಮಾನದಲ್ಲಿ ನಡೆಯುವ ದಶೇಂದ್ರಿಯ ದೃತ ಕ್ರಿಯೆಗಳು ದಶಾವತಾರ ರೂಪಿಯಾದ ಶ್ರೀಹರಿ ನಿನ್ನವೆಂಬೋಣವೇ ನೈವೆದ್ಯಾರ್ಪಣ ನಂತರ ತಾಂಬೂಲ ಸೇವನೆ.

ನಂತರಬಲಭಾಗದಲ್ಲಿದ್ದ ತತ್ವದೇವತೆಗಳ ತೀರ್ಥ ಭೋಜನ ತಾಂಬೂಲಾದಿ ಅರ್ಪಣ, ಎಡಭಾಗದಲ್ಲಿದ್ದ ಶ್ರೀಮದಾಚಾರ್ಯರಾರಂಭಿಸಿ ಸ್ವಗುರು ಪರಿಯಂಅರ ತೀರ್ಥ, ಪ್ರಸಾದ,ತಾಂಬೂಲಾದಿಗಳ ಅರ್ಪಣೆ ನಂತರ ನಮಸ್ಕಾರ. (ಕಾಯಿಕ,ವಾಚಿಕ,ಮನಸಿಕ) ಜನ್ಮಾದ್ಯಸ್ಯಯತಃ ಎಂಬೋ ರೀತ್ಯಾ ಮಹೋಪಕಾರ ಚಿಂತನಾ ಇದರಲ್ಲಿ ವಿಶೇಷತಃ ಶ್ರೀಶನು ನಮ್ಮ ಸಂಗಡ ಮಡಿದ ಉಪಕರಗಳನೇ ಸ್ಮರಿಸಬೇಕು.....ಜಾಗೃದಾವಸ್ಥೆ ಕೊಟ್ಟಿ , ಉಪಾಸನ ಮಾಡಲು ತತ್ವೆಶರಲ್ಲಿ ನಿಂತು ಕೆಲಸ ಮಡಿಸಿದಿ.ನನಗೆ ಅತಿಪ್ರೀತ್ಯಸ್ಪದವಾದ ದೇಹ ನೀನಿದ್ದರೇನೇ ಇರುತ್ತದೆ, ನೀನು ಬಿಟ್ಟರೆ ಹೋಗುತ್ತದೆ. ಇದು ತಿಳಿಯದೇ ನನ್ನ ದೇಹ ಎಂದು ತಿಳಿದು ಮೋಸ ಹೋಗುತ್ತೀನಿ. ಪ್ರತಿ ಕ್ಷಣ ಈ ಮಯಾ

ಬಿಡಿಸಿ ವಿರಕ್ತಿ ಕೊಡು. ಸರ್ವದಾ ನೀನೇ ಕರ್ತಾ ನನ್ನ ಸರ್ವ ವಿಶಯಗಳ ಬಲ್ಲ ಕಾರಣ ನೀ ಮಾಡಿದ್ದಕ್ಕೆ ಒಪ್ಪುವಂತೆ ಜ್ಞನಕೊಡು. ನಿನ್ನ ಉಪಸನೆ ಮಡುವಂತೆ ಬುದ್ಧಿ ಇಂದ್ರಿಯಗಳನ್ನು ತಿದ್ದು, ಮಧ್ಯೆ ನಾ ಉಪಾಸಕನೆಂಬೊ ಅಹಂಕಾರ ಕೊಡಬೇಡ ದಾಸತ್ವಕೊಡು.

ಸ್ವತಂತ್ರ-ನೀನು ಜ್ಞಾನಾನಂದ ಸ್ವರೂಪಾಭಿವ್ಯಕ್ತಿ ಮಡುವವನು. ನನ್ನ ಜ್ಞಾನಾನಂದ ಸ್ವರೂಪಾಭಿವ್ಯಕ್ತಿ ಮಾಡುವವನು ನೀನೇ ಏಕೆಂದರೆ ಸ್ವತಂತ್ರನು ಅದ ಕಾರಣ್ ಏನು ಬೇಕಾದ್ದು ಕೊಡಲು ಶಕ್ತನು ಅನ್ಯರಲ್ಲಿ ಆಗುವ ಕೆಲಸವಲ್ಲ.

ಮಹೋಪಕಾರಿ- ಉಪಕಾರ ಮಾಡುವುದೇ ನಿನ್ನ ಸ್ವಭಾವವು. ಕಾರಣ ಬೇಕಾದ್ದನ್ನು ಅವಶ್ಯ ಕೊಡುವಿ.

ಅತ್ಯಂತ ಪ್ರಿಯ- ಮೇಲೆ ವಿವರಿಸಿದ ಶಕ್ಥಿಯೂ ಇದ್ಧೀತು, ಉಪಕಾರಿಯೂ ಅಗಬಹುದು ಆದರೆ ನನಗೂ ನಿನಗೂ ಸಂಬಂಧ ವಿಲ್ಲದಿದ್ದರೆ ಪ್ರಯೋಜನವಿಲ್ಲವು, ಹಾಗಲ್ಲವು ಅಚ್ಚುತನೆನಿಸಿ ಅತ್ಯಂತ ಪ್ರಿಯನಗಿರುವಿ. ಇನ್ನು ಇಂಥಾ ನಿನ್ನ ವುಪಾಸನ ವಿನಃ ಮತ್ತರನ್ನೂ ಉಪಸಿಸ ಸಲ್ಲ. ಅಲ್ಲದೇ ಜೀವಾತ್ಮನು ಪರಮಾತ್ಮನನ್ನು ಉಪಾಸಿಸುವುದು ನೈಜವು ಮತ್ತು ಸುಲಭವು ಇದಕ್ಕೆ ಅನುಕೂಲಿಸುವಂತೆ ಮೇಲಿನ ಮೂರು ಗುಣಗಳು ನಿನ್ನಲ್ಲಿರುವವು... ಇವು ಇಲ್ಲದಿದ್ದರೆ ನನು ಉದ್ಧಾರವೆ ಆಗುವುದಿಲ್ಲಾ. ಇದು ತಿಳಿಯದೇ ಅನೇಕ ದುಃಖಪೂರಿತ ಜನ್ಮಗಳನ್ನೆತ್ತಿರುವೆನು. ನೀನು ಮರಮಾನುಗ್ರಹಮಡಿ ಈ ನರವೈಶ್ಣವ ಜನ್ಮ ಕೊಟ್ಟಿರುವಿ. ಇದರಲ್ಲಿ ದೇಹೇಂದ್ರಿಯ ಕೃತ ದರ್ಮಗಳು ನಿನಗೆ ಅರ್ಪಿಸದೇ ಹೋದರೆ ಬಂಡೆಯ ಮೇಲೆ ಸ್ವಾತಿಹನಿಯು ಅಖಂಡವಾಗಿ ಸುರಿದಂತೆ ವ್ಯರ್ಥವಗುತ್ತದೆ. ನೀನು ದಯಾಮಯನು ನನ್ನ ಮನಸ್ಸು ನಿನ್ನ ಗುಣರೂಪಕಿಯ ಚಿಂತನೆಯಲ್ಲಿಯೇ ಮಗ್ನವಗುವಂತೆ ಮಾಡು. ಇಂದ್ರಿಯಗಳು ನಿಶ್ಕಮ ಚೇತನರ  ಸೇವಾದಲ್ಲಿ ರತವಾಗುವಂತೆ ಮಡು. ಘೋರ ಸಂಸಾರದಲ್ಲಿ ರತನಾದ ನನ್ನನ್ನು ಉದ್ಧರಿಸು. ಈ ನರವೈಷ್ಣವ ಜನ್ಮದಲ್ಲಿ ಮುಖ್ಯ್ ಮಾಡೋ ಕೆಲಸ ಮಾಡದಿದ್ದರೆ ಹಂದಿ ನಾಯಿಗಿಂತಾ ಕಡೆ ಎಂದು ತಿಳಿಯಬೇಕು. ಕರಣ ಇದು ದುರ್ಲಭ ಎಂದರು ಅರಣ್ಯಕಾಚಾರ್ಯರು. ಇದು ಸುಲಭ ಇದ್ದರೆ ದುರ್ಲಭ ಎನ್ನುತ್ತಿದ್ಧಿಲ್ಲಾ.

ಫಲ- ಇಂಥಾಪ್ರಾತರನ್ಹಿಕವು ನಿತ್ಯ ಮಾಡುತ್ತಿರಬೇಕು. ಇದ್ರಿಂದ ಮನಸ್ಸು ವಿಷಯದಲ್ಲಿ ಮಗ್ನವಾಗೋದಿಲ್ಲಾ. ಜಾಗೃತೆಯಿಂದ ಅಹಂ ಮಮತಾ ನಿರಸನವಾಗಿ ಭಗವದನುಗ್ರಹವಗುತ್ತದೆ. ದೊಡ್ಡವರಾದ ದಾಸರಾಯರು ನಂಬಿಕೆಯಿಂದ ಶಪಥಪೂರ್ವಕವಾಗಿ ಹೇಳಿದ್ದಾರೆ. ಈ ಮಾತಿನಲ್ಲಿ ವಿಶ್ವಾಸವಿಟ್ಟು ಕೆಲಸ ಮಾಡಲಿಕ್ಕೆ ಸುಜೀವರಿಗೇನೆ ಬರುತ್ತದೆ. ಅನ್ಯರಿಗೆ ಬರೋದಿಲ್ಲಾ. ಗುರುಭಕ್ತಿ ದ್ವರಾನೆ ಹರಿಭಕ್ತಿ ಬರುತ್ತದೆ. ಗುರುಭಕ್ತಿ ವೃದ್ಧಿನೆ ಸ್ವಸ್ವರೂಪಾನಂದ ಅಭಿವೃದ್ಧಿಗೆ ಕಾರಣ.

ಇತಿ ಪ್ರಾತರಾನ್ಹೀಕ ಸಮಾಪ್ತಿ

ಶ್ರೀ ಗುರು ಮಧ್ವೇಶರ್ಪಣಮಸ್ತು.